<u>ದಿನಾಂಕಃ**21-03-2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು**.**</u>

<u>ಪಾಟೀ ಸವಾಲುಃ **3** ನೇ ಎದುರುದಾರರ ಪರ ಶ್ರೀ ಎನ್ ಡಿ ಕೆ ವಕೀಲರಿಂದಃ</u>

ನಾನು 9 ನೇ ತರಗತಿ ವರೆಗೂ ವ್ಯಾಸಂಗ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ ಎಂದರೆ ಸರಿ. ಕ್ರಿಮಿನಲ್ ಪ್ರಕರಣದ ದಾಖಲೆಗಳನ್ನು ಹಾಜರುಪಡಿಸಿಲು ನಾನೇ ನಮ್ಮ ವಕೀಲರಿಗೆ ಕೊಟ್ಟಿರುತ್ತೇನೆ. ಸದರಿ ದಾಖಲೆಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ಅಕ್ಷಿತ್.ಬಿ.ಪೂಜಾರಿ ಇವರು ರಾಮ್ ಎಸ್ಟೇಟ್ ನ ವಾಹನ ಚಾಲಕರು ಇರುತ್ತಾರೆ. ನಾನು ಆ ದಿನ ಕೂಲಿ ಕೆಲಸ ಮುಗಿಸಿಕೊಂಡು ಅಕ್ಷಿತ್.ಬಿ.ಪೂಜಾರಿಯ ಬೈಕ್ ನಲ್ಲಿ ಹಿಂಬದಿ ಸವಾರನಾಗಿ ಬರುತ್ತಿದ್ದೆನು. ನಾನು ಆ ದಿನ ಬಸರಿಕಟ್ಟೆಯಿಂದ ಕಲ್ಲುಕೋರೆಯ ಮೂಲಕ ಹೇರೂರು ಕಡೆಗೆ ಬರುತ್ತಿದ್ದೆನು. ಸದರಿ ರಸ್ತೆ ಅಂದಾಜು 15 ಅಡಿ ಅಗಲ ರಸ್ತೆ ಇದ್ದು ಸದರಿ ರಸ್ತೆ ಟಾರು ರಸ್ತೆ ಇರುತ್ತದೆ. ಸದರಿ ಟಾರು ರಸ್ತೆಯ ಅಕ್ಕ ಪಕ್ಕ ಮಣ್ಣಿನ ರಸ್ತೆ ಇರುವುದಿಲ್ಲ ಆದರೆ ಎರಡೂ ಕಡೆ ತೋಟ ಇರುತ್ತದೆ. ಆ ದಿನ ನನಗೆ ಎದುರು ಕಡೆ ಬರುತ್ತಿದ್ದ ಲಾರಿ ಕಾಣಿಸುತ್ತಿದ್ದು ಆತನು ಜೋರಾಗಿ ಬರುತ್ತಿದ್ದು ಸೈಡಿಗೆ ಹಾಕುವಂತೆ ನಮ್ಮ ಬೈಕ್ ಚಾಲಕನಿಗೆ ಹೇಳಿದ್ದು ನಾವು ಸೈಡಿಗೆ ನಿಂತಿರುತ್ತೇವೆ. ಆ ದಿನ ಲಾರಿ ಬಲ ಭಾಗದ ಮುಂಭಾಗ ನಮ್ಮ ಬೈಕಿನ ಬಲ ಭಾಗಕ್ಕೆ ಡಿಕ್ಕಿ ಪಡಿಸಿರುತ್ತದೆ.

2. ಲಾರಿಯ ಯಾವ ಭಾಗ ಜಖಂ ಆಗಿರುತ್ತದೆ ಎಂದರೆ ಸಾಕ್ಷಿ ಡಿಕ್ಕಿ ಪಡಿಸಿದ ಕಾರಣ ನನಗೆ ಎಚ್ಚರ ಇರಲಿಲ್ಲ ಎಂದು ಉತ್ತರಿಸುತ್ತಾರೆ. ಆ ದಿನ ಲಾರಿಯ ಯಾವುದೇ ಭಾಗ ನಮ್ಮ ವಾಹನಕ್ಕೆ ಡಿಕ್ಕಿ ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಆ ಕಾರಣದಿಂದ ಲಾರಿಯ ಯಾವುದೇ ಭಾಗ ಜಖಂಗೊಂಡಿರುವುದಿಲ್ಲ ಎಂದರೆ ಸರಿಯಲ್ಲ. ವಿಮಾ ಕಂಪನಿಯಿಂದ ಅಕ್ರಮ ಲಾಭ ಪಡೆಯುವ ಸಲುವಾಗಿ ನಾನು 1 ನೇ ಎದುರುದಾರನ ವಿರುದ್ಧ ಅಕ್ಷಿತ್.ಬಿ.ಪೂಜಾರಿ ಇವರು ಸುಳ್ಳು ದೂರನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅಕ್ಷಿತ್.ಬಿ.ಪೂಜಾರಿ ಇವರ ಚಾಲನ ಪರವಾನಿಗೆ ಪತ್ರ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ನಾನು ಅಪಘಾತದ ನಂತರ ಮೊದಲು ಬಾಳೆಹೊನ್ನೂರು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ನಂತರ ನಾನು ಕೆ.ಎಂ.ಸಿ ಆಸ್ಪತ್ರೆ ಮಣಿ ಪಾಲದಲ್ಲಿ 10 ದಿನಗಳ ಕಾಲ ಚಿಕಿತ್ಸೆ ಪಡೆದಿರುತ್ತೇನೆ. ಅಲ್ಲಿಂದ ನಾನು ಫಾರ್ಥರ್ ಮುಲ್ಲರ್ ಆಸ್ಪತ್ರೆ ಮಂಗಳೂರಿನಲ್ಲಿ 14 ದಿನಗಳ ಕಾಲ ಒಳ ರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ನಂತರ ಹರ್ಷಲಕ್ಷ್ಮಿ ಆಸ್ಪತ್ರೆ ಕೊಪ್ಪದಲ್ಲಿ 10 ದಿನಗಳ ಕಾಲ ಒಳ ರೋಗಿಯಾಗಿ ಇದ್ದೆನು. ನಾನು ಮಣಿಪಾಲ ಆಸ್ಪತ್ರೆ, ಫಾರ್ಥರ್ ಮುಲ್ಲರ್ ಆಸ್ಪತ್ರೆಯಲ್ಲಿ ತೋರಿಸಿದ ದಾಖಲಾತಿಗಳನ್ನು ಹರ್ಷಲಕ್ಷ್ಮಿ ಆಸ್ಪತ್ರೆಯಲ್ಲಿ ತೋರಿಸಿರುತ್ತೇನೆ.

3. ಮಣಿಪಾಲ ಆಸ್ಪತ್ರೆಯಲ್ಲಿ ಅನುಸರಿಸಿದ ಚಿಕಿತ್ಸಾ ವಿಧಿ ವಿಧಾನಗಳನ್ನು ಅನುಸರಿಸಲು ಏನಾದರೂ ತೊಂದರೆ ಇತ್ತಾ ಎಂದರೆ ಸಾಕ್ಷಿ ಮಣಿ ಪಾಲ ಆಸ್ಪತ್ರೆಯಲ್ಲಿ ವೈಧ್ಯಕೀಯ ವೆಚ್ಚ ಭರಿಸಲು ಸಾಧ್ಯವಾಗದ ಕಾರಣ ಪಾರ್ಥರ್ ಮುಲ್ಲರ್ ಆಸ್ಪತ್ರೆಗೆ ಹೋಗಿರುತ್ತೇನೆ ಎಂದು ಉತ್ತರಿಸುತ್ತಾರೆ. ನಾನು ಮಣಿಪಾಲ ಆಸ್ಪತ್ರೆಯಲ್ಲಿ ನೀಡಿದ ಚಿಕಿತ್ಸಾ ವಿಧಿ ವಿಧಾನಗಳನ್ನು ಅನುಸರಿಸಲು ಆಗದೇ ಪಾರ್ಥರ್ ಮುಲ್ಲರ್ ಆಸ್ಪತ್ರೆಗೆ ಹೋಗಿರುತ್ತೇನೆ ಎಂದರೆ ಸರಿಯಲ್ಲ. ನಾನು ಕ್ರೆಡಿಟ್ ಆಧಾರದ ಮೇಲೆ ಖರೀದಿಸಿದ ಔಷಧಿಗಳನ್ನು ಅಂತಿಮ ಬಿಲ್ ನಲ್ಲಿ ಸೇರಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಆಸರೆ ಮೆಡಿಕಲ್ ನಲ್ಲಿ ಖರೀದಿಸಿದ ಔಷದಿ ಸಾಮಾಗ್ರಿಗಳನ್ನು ಹರ್ಷಲಕ್ಷ್ಮಿ ಆಸ್ಪತ್ರೆಯ ವೈಧರು ನೀಡಿದ ಸಲಹೆ ಚೀಟಿ ಮೇರೆಗೆ ಪಡೆದುಕೊಂಡಿರುತ್ತೇನೆ. ಸದರಿ ಸಲಹೆ ಚೀಟಿಯನ್ನು ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ನಾನು ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ವೈಧ್ಯಕೀಯ ಬಿಲ್ ಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಆಂಬುಲೆನ್ಸ್ ಬಿಲ್ ಗಳನ್ನು ನೀಡಿರುವವರನ್ನು ಸಾಕ್ಷಿದಾರರಾಗಿ ಮಾಡಲು ತೊಂದರೆ ಇರುವುದಿಲ್ಲ. ಸದರಿ ಆಂಬುಲೆನ್ಸ್ ಬಿಲ್ ಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಹರ್ಷ ಲಕ್ಷ್ಮಿ ಆಸ್ಪತ್ರೆಯಲ್ಲಿ ಯಾವುದೇ ಚಿಕಿತ್ಸೆ ಪಡೆಯದೇ ಇದ್ದರೂ ವಿಮಾ ಕಂಪನಿಯಿಂದ ಪರಿಹಾರ ಪಡೆಯುವ ಸಲುವಾಗಿ ಸುಳ್ಳು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ವಾಕರ್ ಮುಖಾಂತರ ಓಡಾಡಲು ವೈಧ್ಯರು ತಿಳಿಸಿದ್ದರೂ ಸಹ ನಾನು ಈ ದಿನ ನ್ಯಾಯಾಲಯಕ್ಕೆ ವೀಲ್ ಚೇರ್ ಮುಖಾಂತರ ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ಬಂದಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಎದುರುದಾರರ ತಪ್ಪಿನಿಂದ ಯಾವುದೇ ಅಪಘಾತ ಆಗದೇ ಇದ್ದ ಕಾರಣ 3 ನೇ ಎದುರುದಾರರು ಪರಿಹಾರ ಕೊಡಲು ಬಾಧ್ಯಸ್ತರು ಇರುವುದಿಲ್ಲ ಎಂದರೆ ಸರಿಯಲ್ಲ.

4. ನಾನು ರಾಮ್ ಎಸ್ಟೇಟ್ ನಲ್ಲಿ 20 ವರ್ಷಗಳಿಂದ ಕೆಲಸ ಮಾಡುತ್ತಿದ್ದೆನು. ಸದರಿ ಎಸ್ಟೇಟ್ ನಲ್ಲಿ ಕಾಫಿ ಮತ್ತು ಅಡಿಕೆ 400 ಎಕರೆಯಲ್ಲಿ ಇರುತ್ತದೆ. ಸದರಿ ತೋಟದಲ್ಲಿ ಸುಮಾರು 100 ಜನ ಕೆಲಸಗಾರರು ಇರುತ್ತಾರೆ. ನಾನು ಸದರಿ ತೋಟದಲ್ಲಿ ಖಾಯಂ ನೌಕರರಾಗಿ ಕೆಲಸ ಮಾಡುತ್ತಿರಲಿಲ್ಲ. ಆದರೆ ದಿನಗೂಲಿ ನೌಕರರಾಗಿ ಕೆಲಸ ಮಾಡುತ್ತೇನೆ. ಅದೇ ಮಾಲೀಕರ ಬೇರೆ ಬೇರೆ ತೋಟಗಳಲ್ಲಿ ಕೆಲಸ ಮಾಡುತ್ತಿದ್ದೆನು. ಸದರಿ ತೋಟದಲ್ಲಿ ಖಾಯಂ ಕೆಲಸ ಮಾಡುವವರಿಗೆ ಪ್ರಾವಿಡೆಂಟ್ ಫಂಡ್ ಇರುತ್ತದೆ. ನನಗೆ ಪ್ರಾವಿಡೆಂಟ್ ಫಂಡ್ ಇರುವುದಿಲ್ಲ. ನಾನು ಅಲ್ಲಿ ಕೆಲಸ ಮಾಡಿದ್ದೆ ಆಗಿದ್ದರೆ ನನಗೆ ಪ್ರಾವಿಡೆಂಟ್ ಫಂಡ್ ಇರುತ್ತಿತ್ತು ಎಂದರೆ ಸರಿಯಲ್ಲ. ನನಗೆ ಕೂಲಿಯನ್ನು ನಗದಾಗಿ ಕೊಡುತ್ತಿದ್ದರು. ಎಷ್ಟು ಜನಕ್ಕೆ ನಗದಾಗಿ

ಕೂಲಿ ಕೊಡುತ್ತಿದ್ದರು ಎಂದರೆ ಸಾಕ್ಷಿ 20 ಜನಕ್ಕಿಂತ ಹೆಚ್ಚಿನವರು ಇದ್ದರು ಎಂದು ಉತ್ತರಿಸುತ್ತಾರೆ. ನನಗೆ ಕೂಲಿ ಕೊಡುವಾಗಿ ಪುಸ್ತಕಕ್ಕೆ ನಮ್ಮ ಸಹಿ ಪಡೆಯುತ್ತಿದ್ದರು. ನಾನು ರಾಮ್ ಎಸ್ಟೇಟ್ ನಲ್ಲಿ ಕೆಲಸ ಮಾಡುತ್ತಿದ್ದೆ ಹಾಗೂ ಇಷ್ಟೇ ವೇತನ ಪಡೆಯುತ್ತಿದ್ದೆ ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸುತ್ತೇನೆ. ನನಗೆ ಸೇರಿದ ಪಡಿತರ ಚೀಟಿಯನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ. ನನಗೆ ಬಿ.ಪಿ.ಎಲ್ ಪಡಿತರ ಚೀಟಿ ಇರುತ್ತದೆ. ಸದರಿ ಪಡಿತರ ಚೀಟಿಯಲ್ಲಿ ನಮ್ಮ 4 ಜನರ ಹೆಸರು ಇರುತ್ತದೆ. ನನ್ನ ಮಕ್ಕಳು ಪಿ.ಯು.ಸಿ ಹಾಗೂ 9 ನೇ ತರಗತಿ ವ್ಯಾಸಂಗ ಮಾಡುತ್ತಿದ್ದಾರೆ. ನಾನು ಮತ್ತು ನನ್ನ ಹೆಂಡತಿ ಕೂಲಿ ಕೆಲಸಕ್ಕೆ ಹೋಗುತ್ತೇವೆ. ನನಗೆ ಇದ್ದ ಎ.ಪಿ.ಎಲ್ ಹಾಗೂ ಬಿ.ಪಿ.ಎಲ್ ಕಾರ್ಡನ್ನು ಹಾಜರುಪಡಿಸಬಹುದು. ಸಾಕ್ಷಿ ಮುಂದುವರೆದು ಅಪಘಾತದ ನಂತರ ಬಿ.ಪಿ.ಎಲ್ ಕಾರ್ಡನ್ನು ಕೊಟ್ಟಿರುತ್ತಾರೆ ಎಂದು ಉತ್ತರಿಸುತ್ತಾರೆ.

5. ನನ್ನ ವೈಧ್ಯಕೀಯ ವೆಚ್ಚಕ್ಕೆ ರೂ. 13 ಲಕ್ಷ ಹಾಗೂ ರೂ.8 ಲಕ್ಷ ಖರ್ಚು ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ- 178 ನ್ನು ಮುಂದುವರೆದ ವೈಧ್ಯಕೀಯ ಚಿಕಿತ್ಸೆಗಾಗಿ ಹಣ ಬೇಕಾಗುತ್ತದೆ ಎಂದು ಈ ಪ್ರಕರಣಕೋಸ್ಕರ ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಮುಂದುವರೆದ ಚಿಕಿತ್ಸೆಗಾಗಿ ರೂ.8 ಲಕ್ಷ ಹಣ ಬೇಕಾಗುತ್ತದೆ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಹೇಳಿದಂತೆ ಮಾಸಿಕ ಆದಾಯ ನನಗೆ ಇರಲಿಲ್ಲ ಎಂದರೆ ಸಾಕ್ಷಿ ನನಗೆ ಅದಕ್ಕಿಂತ ಜಾಸ್ತಿ ಇತ್ತು ಎಂದು ಉತ್ತರಿಸುತ್ತಾರೆ.ನಾನು ಅಕ್ರಮ ಹಣ ಪಡೆಯುವ ಸಲುವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಃ ಎದುರುದಾರ **1** ಮತ್ತು **2** ಏಕ ಪಕ್ಷೀಯ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.</u>

<u>ಮರು ವಿಚಾರಣೆಃ ಇಲ್ಲಃಃ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ
Sd/-xxx
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ